ಕೆಳಗಿನ ವಚನ ಬಹುಮುಖ್ಯವಾದುದು.

**ಮನಕೆ ಮನೋಹರರಲ್ಲದ ಗಂಡರು / ಮನಕೇ ಬಾರರು, ಕೇಳವ್ವಾ ಕೆಳದೀ, / ಪನ್ನಗಭೂಷಣರಲ್ಲದ ಗಂಡರು / ಇನ್ನೆನಗಾಗದ ಮೋರೆ ನೋಡವ್ವಾ / ಕನ್ನೆಯಂದಿನ ಕೂಟ, ಚಿಕ್ಕಂದಿನ ಬಾಳುವೆ, / ನಿಮ್ಮಾಣೆಯಯ್ಯಾ, ಕೂಡಲ ಸಂಗಮದೇವಾ**

ಎಂದು ಹಾಡುವ ಬಸವಣ್ಣ ಈ ಕಾಲದಲ್ಲೇ ರೂಪುಗೊಂಡಿರಬಹುದು. ಇದೊಂದು ಬಹಳ ಗುರುತರ ಸಂಗತಿಯಾಗಿಯೇ ಕಾಣಿಸುತ್ತದೆ. ಮಾತ್ರವಲ್ಲ, ಆಯ್ದಕ್ಕಿ ಲಕ್ಕಮ್ಮನಂತವರು, 'ಒಮ್ಮನದಲ್ಲಿ ಮೀರಿ ಇಮ್ಮನದಲ್ಲಿ ತಂದಿರಿ. ಇದು ನಿಮ್ಮ ಮನವೋ ಬಸವಣ್ಣನ ಅನುಮಾನದ ಚಿತ್ತವೋ?' ಎಂದು ತಮ್ಮ ನಿಷ್ಠೆಯನ್ನು ಬಸವ ಅನುಮಾನದಿಂದ ನೋಡುತ್ತಿದ್ದಾನೆ ಎಂದು ಆಕ್ಷೇಪಿಸುವುದು ಸಣ್ಣ ವಿಷಯವಲ್ಲ. ಆತ ಇದಕ್ಕೆಲ್ಲ ಮನಸ್ಸು ತೆರೆದಿಟ್ಟನೇ ಹೊರತು ತನ್ನ ಅಧಿಕಾರದ ಚಾಟಿಯನ್ನು ಬೀಸಿದಂತಿಲ್ಲ. ಹಾಗೆಯೇ ಆತ ಕಲ್ಯಾಣ ತೊರೆದು ಹೊರಟ ಮೇಲೆ ನೀಲಲೋಚನೆಗೆ ಬರುವಂತೆ ಹೇಳಿಕಳಿಸಿದಾಗ ಆಕೆ ನಿರಾಕರಿಸುತ್ತಾಳೆ. 'ಹಂದೆಯಲ್ಲ ನಾನು/ ಹರುಷದ ಧೈರ್ಯವುಳ್ಳ ಹೆಣ್ಣು ನಾನು/ ಕಾಮವನಳಿದವಳಾನಾದ ಕಾರಣ/ ಬಸವನ ಹಂಗೆನಗಿಲ್ಲವಯ್ಯ' ಎನ್ನುವ ದಿಟ್ಟತನ ತೋರುತ್ತಾಳೆ. ಇದೂ ಕೂಡ ಭಕ್ತಿ ಸಂವಿಧಾನ ಒದಗಿಸಿದ ಒಂದು ತೆರಪು ಮತ್ತದನ್ನು ಬಸವಣ್ಣ ಒಪ್ಪಿಕೊಂಡಿರುವ ಮಾಗುವಿಕೆಯನ್ನು ಸೂಚಿಸುತ್ತದೆ.

ಹೀಗಲ್ಲದೆ ಹೋದರೆ ಶರಣೆಯರು ಅವನಿಗಾಗಿ ಮರುಗುವುದು ಸಾಧ್ಯವಿರಲಿಲ್ಲ. ನಾಗಲಾಂಬಿಕೆ ಅವನ ಅಗಲುವಿಕೆಗೆ ದುಃಖಿಸುವುದು ಹೀಗೆ:

**ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಡೆ / ಭಕ್ತಿಯ ಬೆಳವಿಗೆ ದೆಸೆ ದೆಸೆಗೆಲ್ಲಾ ಪಸರಿಸಿತ್ತಲ್ಲಾ!**

**..................................**

**ನೀವು ಲಿಂಗೈಕ್ಯವಾದೊಡೆ, ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ / ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ / ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತಲ್ಲಾ ಬಸವಣ್ಣಾ / ಎನ್ನನೊಯ್ಯದೆ ಹೋದೆಯಲ್ಲಾ ಪಂಚಪರುಷ ಮೂರ್ತಿ ಬಸವಣ್ಣಾ**

ಇದು ಒಂದು ಸುಂದರ ವ್ಯವಸ್ಥೆ ಕಣ್ಣೆದುರೇ ರೂಪುಗೊಂಡು ಕಣ್ಣೆದುರೇ ಕುಸಿದು ಹೋದುದರ ಆಕ್ರಂದನ. 'ಆ ಆಕ್ರಂದನದಲ್ಲಿ ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ... ಕಂಗಳ ಮುಂದಣ ಕತ್ತಲೆ ಹರಿಯಲೊಡನೆ/ ಮಂಗಳದ ಮಹಾಬೆಳಗಿನೊಳಗೋಲಾಡಿ ಸುಖಿಯಾದೆನಯ್ಯಾ' ಎಂಬ ಹಡಪದ ಲಿಂಗಮ್ಮನಂಥವರ ಧ್ವನಿಯೂ ಇದೆ.

ಈ ಎಲ್ಲ ಬೆಳವಣಿಗೆಗಳು ಹೇಳುವುದೇನೆಂದರೆ, ಸಂವಾದದ ಮೂಲಕ ರೂಪುಗೊಳ್ಳುತ್ತಿದ್ದ ಹೊಸ ಬದುಕಿನ ನಿಯಮಗಳಲ್ಲಿ ಹೆಣ್ಣಿನೆಡೆಗಿನ ನೋಟವನ್ನು ಶರಣರು ಕೂಡ ಬದಲಿಸಿಕೊಳ್ಳಬೇಕಾಗಿದ್ದ ಸನ್ನಿವೇಶದಲ್ಲಿ ಅದನ್ನು ಶರಣೆಯರು ಆಗು ಮಾಡಿದ ಎಲ್ಲ ಲಕ್ಷಣಗಳು ಇದ್ದವು. ನಾಯಕತ್ವ ವಹಿಸಿಕೊಂಡಿದ್ದ ಬಸವಣ್ಣ ಇದನ್ನು ಮನಗಂಡಿದ್ದನ್ನು ಶರಣೆಯರು ಗುರುತಿಸಿದ್ದಾರೆ. ಹೀಗಾಗಿ ಅವರು ಅವನನ್ನು ಗೌರವದಿಂದ ಉಲ್ಲೇಖಿಸುತ್ತಾರೆ, ನೆನಪಿಸಿಕೊಳ್ಳುತ್ತಾರೆ. ಈ ಮೂಲಕ ಅವರು ಬಸವಣ್ಣ ತನ್ನ ವಚನಗಳಲ್ಲಿ ದಾಖಲಿಸಿದ ಹೆಣ್ಣಿನ ಅಭಿವ್ಯಕ್ತಿಯನ್ನು ಮೀರಿ, ದಾಖಲಿಸದೇ ಹೋದ ಹೆಣ್ಣಿನ ಚಿತ್ರವೊಂದು ಆತನಲ್ಲಿ ರೂಪುಗೊಂಡಿತ್ತೇನೋ ಎಂಬ ಸುಳುಹು ನೀಡುತ್ತಾರೆ. ಆತನೆಡೆಗೆ ಕೃತಜ್ಞತೆಯ ಮಾತಾಡಿದ್ದಾರೆ. ಅವರು ಹೀಗೆ ಮಾತನಾಡದೇ ಹೋಗಿದ್ದರೆ ವಚನಗಳಾಚೆಗಿನ ಬಸವಣ್ಣನನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಹೆಣ್ಣುಮಕ್ಕಳೆಡೆಗೆ ತೋರಿದ ಆದರದ ನಡೆಗೆ ಹೆಣ್ಣುಮಕ್ಕಳು ತೋರುವ ಅಗಾಧ ಪ್ರೀತಿಯ ಸಂಕೇತವಾಗಿಯೂ ನಾವು ಬಸವಣ್ಣನೆಡೆಗಿನ ಶರಣೆಯರ ಮೆಚ್ಚುಗೆಯ ವಚನಗಳನ್ನು ನೋಡಬಹುದು. ಆ ಮೂಲಕ ಶರಣೆಯರು ನಮ್ಮ ವರ್ತಮಾನದ ಬದುಕಿನಲ್ಲಿ ಗಂಡು-ಹೆಣ್ಣುಗಳ ನಡುವಿನ ಸಂಬಂಧ ಹೇಗಿರಬೇಕು ಎಂಬುದರ ಸೂಚನೆಯನ್ನೂ, ಎಚ್ಚರಿಕೆಯನ್ನೂ ನಮಗೆ ನೀಡುತ್ತಿರುವಂತೆಯೂ ಇದನ್ನು ನಾವು ಸ್ವೀಕರಿಸಬೇಕಾಗಿದೆ. ●

**ಆಕರ ಗ್ರಂಥಗಳು:** 1. ಕಲಬುರ್ಗಿ ಎಂ.ಎಂ. (ಸಂ), ಬಸವಣ್ಣನವರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ; 2. ವೀರಣ್ಣ ರಾಜೂರ (ಸಂ); ಶಿವಶರಣೆಯರ ವಚನ ಸಂಪುಟ, ಅದೇ ; 3. ಬಸವರಾಜು ಎಲ್.; ಅಲ್ಲಮನ ವಚನ ಚಂದ್ರಿಕೆ; ಲೋಹಿಯಾ ಪ್ರಕಾಶನ, ಬಳ್ಳಾರಿ.